


ಪತ್ರಕರ್ತ: 'ನಮ್ಮ ಪಕ್ಷದ ತತ್ವ, ಸಿದ್ಧಾಂತಗಳನ್ನು ಒಪ್ಪಿಕೊಂಡು ಬಂದರೆ ಸ್ವಾಗತ. ಯಾಕಂದ್ರೆ ನಮ್ ಪಕ್ಷ ಸಾಗರ ಇದ್ದಂತೆ' ಅಂತ ಮುಖ್ಯಮಂತ್ರಿಯಾದ ನೀವು ಹೇಳಿದ್ರಿ. ಆದರೆ ಜನಪ್ರತಿನಿಧಿಗಳು ನಿಮ್ ಪಕ್ಷಕ್ಕೆ ಬರದೆ, ವಿರೋಧ ಪಕ್ಷಕ್ಕೆ ಹೋಗವ್ರೆ. ಇದರ ಬಗ್ಗೆ ಏನಂತೀರಾ ಸರ್?
ಮುಖ್ಯಮಂತ್ರಿ: ನಮ್ಮ ಪಕ್ಷ ಸಾಗರ ಅಂತ ಅಂದದ್ದೆ ತಪ್ಪಾಯ್ತು. ಸಾಗರದ ನೀರು ಉಪ್ಪು ಅಂತ ಬೇರೆ ಪಕ್ಷಕ್ಕೆ ಹೋಗವ್ರೆ.

ಮೇಷ್ಟ್ರು: ಬ್ರಿಟಿಷರು ಭಾರತಕ್ಕೆ ಹೇಗೆ ಬಂದರು?
ವಿದ್ಯಾರ್ಥಿ: ನಮ್ಮವರು ಬರಮಾಡಿಕೊಂಡರು, ಅವರು ಬಂದರು.

ಮೇಷ್ಟ್ರು: ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಮುತ್ತು ರತ್ನಗಳನ್ನು ರಸ್ತೆಯ ಬದಿಗಳಲ್ಲಿ ರಾಶಿ ರಾಶಿ ಹಾಕಿಕೊಂಡು ಬಳ್ಳಗಳಲ್ಲಿ (ಸೇರು) ಮಾರಾಟ ಮಾಡುತ್ತಿದ್ದರು. ಇದು ಯಾವ ಕಾಲ?
ವಿದ್ಯಾರ್ಥಿ: ಅತ್ಯಂತ ಸಮೃದ್ಧಿಯ ಕಾಲ ಸರ್.

ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದ ಪುಟ್ಟಂಜ ಭಾವಪರವಶನಾಗಿ 'ನೀನಾರಿಗಾದೆಯೊ ಎಲೆ ಮಾನವ' ಅಂತ ಹೇಳುವಷ್ಟರಲ್ಲಿ, ಸಭಿಕರ ಸಾಲಿನಲ್ಲಿ ಕುಳಿತಿದ್ದ ನಂಜ ಎದ್ದು ನಿಂತು, 'ಹಾಗೆನ್ನಬೇಡಿ, ನನ್ನ ಹೆಂಡತಿ ಅಡುಗೆ ಮನೆಯಲ್ಲೇ ಹತ್ತಾರು ಜಿರಳೆಗಳಿಗೆ ಆಶ್ರಯ ನೀಡಿದ್ದಾಳೆ' ಅಂದ.

ಅಪ್ಪ: ಒಂಬತ್ತನೆ ತರಗತಿಯ ವಾರ್ಷಿಕ ಪರೀಕ್ಷೆಯ ಕನ್ನಡ ವಿಷಯದಲ್ಲಿ, 'ನಿಮಗ್ಯಾಕೆ ಕೊಡಬೇಕು ಕಪ್ಪ, ನೀವೇನು ಉತ್ತಿರೊ, ಬಿತ್ತಿರೊ ಅಥವಾ ರಕ್ತ ಸಂಬಂಧಿಗಳೊ?' ಈ ವಾಕ್ಯವನ್ನು ಯಾರು ಯಾರಿಗೆ ಹೇಳಿದರು?
ವಿದ್ಯಾರ್ಥಿ: ಈ ವಾಕ್ಯವನ್ನು ನಮ್ಮ ಕನ್ನಡ ಮೇಷ್ಟ್ರು ಆದ ಎಮ್. ಆರ್. (ಮಾರಸಂದ್ರ ರಮೇಶ್) ಅವರು ವಿದ್ಯಾರ್ಥಿಗಳಾದ ನಮಗೆ ಹೇಳಿದರು.




ದೀಪಾವಳಿ ಹಬ್ಬಕ್ಕೆ ಬಂದ ಮಗಳು ಮತ್ತು ಅಳಿಯನಿಗೆ ಎದುರಾದ ಪ್ರಶ್ನೆ.
ಮಾವ: ನಿಮ್ಮಿಬ್ಬರಲ್ಲಿ ಯಾರು ಮೇಲು?
ಅಳಿಯ: ನಾನೇ ಮೇಲು. ಯಾಕೆಂದರೆ ನಿಮ್ ಮಗಳು ಫೀಮೇಲು.

ಮಳೆಗಾಲವು ಯಾವ ಸಂಧಿಗೆ ಉದಾಹರಣೆಯಾಗಿದೆ ಎಂಬ ಪ್ರಶ್ನೆಗೆ ಒಂಬತ್ತನೇ ತರಗತಿಯ ವಿದ್ಯಾರ್ಥಿ ಮೋಹನ ಬರೆದ ಉತ್ತರ ಹೀಗಿತ್ತು. 'ಮಳೆಗಾಲವು ಸೋರುವ ಮನೆಗಳ ಸಂದಿಗೆ ಪಕ್ಕಾ ಉದಾಹರಣೆಯಾಗಿದೆ'.

ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಧುಸೂದನ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾಯಿತು. ಅವರ ಆಪ್ತಮಿತ್ರ ಅಮರ್ ಫೋನ್ ಮಾಡಿ ಅಭಿನಂದಿಸಿದರು. ಮುಂದುವರೆದು...
ಅಮರ್: ನಿಮ್ಮನ್ನು ಯಾವ ಕ್ಷೇತ್ರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಿದ್ದಾರೆ.
ಮಧುಸೂದನ: 'ಯಲಹಂಕ ಕ್ಷೇತ್ರ'.

ಪುಟ್ಟಂಜ: ಪುಟಾಣಿ ಮಕ್ಕಳು ಸತ್ಯವನ್ನೇ ಹೇಳುತ್ತಾರೆ ಎನ್ನುವುದಕ್ಕೆ ಸೂಕ್ತ ಉದಾಹರಣೆ ನೀಡಬಲ್ಲೆಯಾ?
ರಂಗಸ್ವಾಮಿ: ಪುಟಾಣಿಗಳು ಒಂದು, ಸೊನ್ನೆಯನ್ನ, ಒಂದು, ಸೊನ್ನೆ ಅಂತಲೆ ಓದುತ್ತಾರೆ. ಆದರೆ ದೊಡ್ಡವರು ಒಂದು ಮತ್ತು ಸೊನ್ನೆಯನ್ನು ಹತ್ತು ಅನ್ನುತ್ತಾರೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ

ಜ್ಯೋತಿಷಿ: ನಿಮ್ಮ ರಾಶಿ ಯಾವುದು?
ಪುಟ್ಟಂಜ: ಭಿನ್ನರಾಶಿ




ಯೂಟ್ಯೂಬ್‌ನಲ್ಲಿ 'ದಿನಕ್ಕೊಂದು ಏಲಕ್ಕಿ ತಿನ್ನುತ್ತಿದ್ದರೆ ಏನಾಗುತ್ತೆ ಗೊತ್ತಾ' ಅಂತ ಒಂದು ವಿಡಿಯೊದ ತಂಬ್‌ನೈಲ್ ಇತ್ತು. ಏನಾಗುತ್ತೆ ಅಂತ ತಿಳಿದುಕೊಳ್ಳಲು ಆ ವಿಡಿಯೊ ಕ್ಲಿಕ್ ಮಾಡಿದೆ. ಆಮೇಲೆ ನೋಡಿದರೆ ನಮ್ಮ ಚಾನಲ್‌ಗೆ ನೀವಿನ್ನೂ ಸಬ್‌ಸ್ಕ್ರೈಬ್ ಆಗಿಲ್ಲವೆ, ಹಾಗಿದ್ದರೆ ಕೂಡಲೆ ಆಗಿ. ಬೆಲ್ ಬಟನ್ ಒತ್ತಿ, ಹಾಗೆ ಈ ವಿಡಿಯೊಗೆ ಒಂದು ಲೈಕ್ ಕೊಡೋದನ್ನ ಮರಿಬೇಡಿ ಅಂತ ಬಂತು. ಮುಂದುವರೆದು, 'ದಿನಕ್ಕೊಂದು ಏಲಕ್ಕಿ ತಿನ್ನುತ್ತಿದ್ದರೆ ಡಬ್ಬಿಯಲ್ಲಿ ಇರುವ ಏಲಕ್ಕಿ ಕಡಿಮೆ ಆಗುತ್ತದೆ. ಕೊನೆಗೊಂದು ದಿನ ಡಬ್ಬಿಯೇ ಖಾಲಿಯಾಗಿ ಬಿಡುತ್ತದೆ. ಒಂದೇ ಒಂದು ಏಲಕ್ಕಿಯೂ ಉಳಿಯುವುದಿಲ್ಲ. ಈ ವಿಡಿಯೊ ಇಷ್ಟವಾಗಿದ್ದರೆ ಮತ್ತೊಂದು ಲೈಕ್ ಕೊಡಿ' ಅನ್ನೋದಾ...